**SPL.C. 5136/2024**

ಚಾ.ಸಾ **:1** ಪ್ರಾ.ಸಾ **:1**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ರಾಜಾ |
| ತಂದೆ ಹೆಸರು | : | ಶೇಖರಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿ |
| ವಿಳಾಸ | : | ಈ.ಜೆ.ಉದ್ಬಾಳ |

ಸಾಕ್ಷಿಗೆ ದಿನಾಂಕ **26-11-2025** ರಂದು ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಅಭೀಯೋಜಕರಿಂದ :</u>

ನಾನು ಚಲುವಾದಿ ಜಾತಿಗೆ ಸೇರಿರುತ್ತೇನೆ. ಅದು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ. ಈ ಕೇಸಿನ ಎಲ್ಲಾ ಆರೋಪಿತರು ಕುರುಬ ಜನಾಂಗಕ್ಕೆ ಸೇರಿದ್ದಾರೆ.

2. ಚಾ.ಸಾ2 ನನ್ನ ಹೆಂಡತಿ. ಚಾ.ಸಾ3 ನನ್ನ ತಮ್ಮ. ಚಾ.ಸಾ4 ಇವಳು ಚಾ.ಸಾ3 ಈತನ ಹೆಂಡತಿ. ಚಾ.ಸಾ5 ನನ್ನ ದೊಡ್ಡಮ್ಮ.

3. ನಾನು ಗ್ರಾಮ ಪಂಚಾಯಿತಿಯ ಸದಸ್ಯನಿದ್ದೇನೆ. ದಿನಾಂಕ 05-12-2022 ರಂದು ಬೆಳಿಗ್ಗ 09-00 ಗಂಟೆಗೆ ನಾನು ನಮ್ಮೂರಿನಲ್ಲಿ ಗೋಡ್ವಾನ್ ಕಟ್ಟುವ ಸ್ಥಳಕ್ಕೆ ಪರಿಶೀಲನೆಗಾಗಿ ಹೋಗಿದ್ದೆನು. ಆ ಸ್ಥಳಕ್ಕೆ 1 ಮತ್ತು 2 ನೇ ಆರೋಪಿತರು ಬಂದಿದ್ದರು. ಅವರು ಜೆ.ಸಿ.ಬಿ.ಯ ಮೂಲಕ ಕಟ್ಟಡಕ್ಕೆ ಸಂಗ್ರಹಿಸಿದ ಎಲ್ಲಾ ವಸ್ತುಗಳನ್ನು ನೆಲ ಸಮಾನ ಮಾಡುತ್ತಿದ್ದರು. ಅದನ್ನು ನಾನು ಪ್ರಶ್ನೆ ಮಾಡಿದ್ದೇನೆ.

4. ಆಗ 1 ಮತ್ತು 2 ನೇ ಆರೋಪಿತರು ನನಗೆ ನೀನ್ಯಾರೋ ಕೇಳುವವನು ಬ್ಯಾಗಾರ ಸೂಳೆ ಮಗನೆ ಎಂದು ಬೈದಿರುತ್ತಾರೆ.

5. ಆರೋಪಿ ಸಂ. 1 ಮತ್ತು 2 ಇವರು ಆ ಸಮಯದಲ್ಲಿ ಪಕ್ಕದಲ್ಲಿ ವಾಸವಿದ್ದ ಕುರುಬ ಜನಾಂಗದವರನ್ನು ಕೂಗಿ ಕರೆದಿದ್ದರು. ಆಗ 18 ಕುರುಬರ ಜನಾಂಗದ ಜನರು ನಾನಿದ್ದ ಸ್ಥಳಕ್ಕೆ ಬಂದಿದ್ದರು. ಅವರೇ ಈ ಕೇಸಿನ 2 ರಿಂದ 20 ನೇ ಆರೋಪಿತರು ಆಗಿರುತ್ತಾರೆ. ( ಎಲ್ಲಾ ಆರೋಪಿತರು ಗೈರು ಹಾಜರಿದ್ದಾರೆ. ಅವರನ್ನು ಗುರುತಿಸುವ ಕುರಿತು ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿತರ ಪರವಾಗಿ ಎಮ್. ಎಸ್. ಬಿ. ವಕೀಲರು ಬಿ.ಬಿ.ಎ. ವಕೀಲರ ಪರವಾಗಿ ತಿಳಿಸಿರುತ್ತಾರೆ.)

6. ಆರೋಪಿ. ಸಂ. 1 ನನ್ನ ಎಡ ಕಿವಿಗೆ ಕಟ್ಟಿಗೆಯಿಂದ ಬಡಿದಿರುತ್ತಾನೆ. 2 ನೇ ಆರೋಪಿ ಕಲ್ಲಿನಿಂದ ನನ್ನ ಬಲ ಕಿವಿಗೆ ಬಡಿದಿರುತ್ತಾನೆ. 3 ನೇ ಆರೋಪಿ ನನ್ನನ್ನು ಒದಿದ್ದಾನೆ. 5 ನೇ ಆರೋಪಿ ಚಾಕುವಿನಿಂದ ನನ್ನನ್ನು ತಿವಿಯಲು ಪ್ರಯತ್ನಿಸಿದ್ದಾನೆ.

7. ಆನಂತರ ಎಲ್ಲಾ ಆರೋಪಿತರು ನನ್ನನ್ನು ಬಡಿಯಲು ಪ್ರಯತ್ನಿಸಿದ್ದಾರೆ. ನಾನು ಚೀರಾಡಿದ್ದೇನೆ. ಆಗ ನನ್ನ ಹೆಂಡತಿ ಅಲ್ಲಿಗೆ ಬಂದಿದ್ದಳು. 15 ಮತ್ತು 17 ನೇ ಆರೋಪಿತರು ನನ್ನ ಹೆಂಡತಿಯನ್ನು ಒದ್ದಿದ್ದಾರೆ ಮತ್ತು ಬಡಿದಿದ್ದಾರೆ. ಅವರಿಬ್ಬರು ನನ್ನ ಹೆಂಡತಿಗೆ ಬ್ಯಾಗಾರ ಸೂಳೆ ಎಂದು ಬೈದಿದ್ದಾರೆ.

8. ಆನಂತರ ಎಲ್ಲಾ ಆರೋಪಿತರು ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಬಡಿದಿರುತ್ತಾರೆ. ಆ ಸ್ಥಳಕ್ಕೆ ಚಾ.ಸಾ3 ರಿಂದ 5 ಇವರು ಬಂದಿದ್ದರು. ಅವರು ನಮ್ಮನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

9. ಆರೋಪಿ ಸಂ. 4/ನಾಗೇಶ ಈತನು ಚಾ.ಸಾ3 ಈತನನ್ನು ಬ್ಯಾಗಾರ ಸೂಳೆ ಮಗ ಎಂದು ಬೈದಿದ್ದಾನೆ. 20 ನೇ ಆರೋಪಿ ಚಾ.ಸಾ3 ಈತನನ್ನು ಕಟ್ಟಿಗೆಯಿಂದ ತಲೆಗೆ ಬಡಿದಿದ್ದಾನೆ.

10.ಆರೋಪಿ ಸಂ. 9 ಮತ್ತು 16 ಇವರು ಚಾ.ಸಾ4 ಇವಳನ್ನು ಬ್ಯಾಗಾರ ಸೂಳೆ ಎಂದು ಬೈದಿದ್ದಾರೆ, ಅವಳ ಸೀರೆ ಎಳೆದಿದ್ದಾರೆ ಮತ್ತು ಅವಳನ್ನು ಬಡಿದಿದ್ದಾರೆ.

11. ಆರೋಪಿ ಸಂ. 6 ಈತನು ಚಾ.ಸಾ5 ಇವಳಿಗೆ ಬ್ಯಾಗಾರ ಸೂಳೆ ಎಂದು ಬೈದಿದ್ದಾನೆ. 7 ನೇ ಆರೋಪಿ ಚಾ.ಸಾ5 ಇವಳನ್ನು ಒದ್ದಿರುತ್ತಾನೆ.

12. ಆನಂತರ ಎಲ್ಲಾ ಆರೋಪಿತರು ನನ್ನನ್ನು ಮತ್ತು ಚಾ.ಸಾ2 ರಿಂದ 5 ಇವರನ್ನು ಬಡಿದಿರುತ್ತಾರೆ.

13. ನಮ್ಮೆಲ್ಲರನ್ನು ಅರೋಪಿತರು ಬಡಿದ ನಂತರ ಚಾ.ಸಾ6 ರಿಂದ 9 ಇವರು ಆ ಸ್ಥಳಕ್ಕೆ ಬಂದಿದ್ದರು ಮತ್ತು ನಮ್ಮನ್ನು ಬಿಡಿಸಿಕೊಂಡಿರುತ್ತಾರೆ. ನಾನು ಆ ಸ್ಥಳದಲ್ಲಿ ಎಚ್ಚರ ತಪ್ಪಿ ಬಿದ್ದಿದ್ದೆನು.

14. ಆನಂತರ ನನಗೆ ಎಚ್ಚರ ಆಗಿತ್ತು. ಆ ಸ್ಥಳದಿಂದ ನಾನು, ಚಾ.ಸಾ2 ರಿಂದ 5 ಸೇರಿಕೊಂಡು ಸಿಂಧನೂರಿನ ಗ್ರಾಮೀಣ ಪೊಲೀಸ್ ಠಾಣೆಗೆ ಹೋಗಿದ್ದೇವು. ಅಲ್ಲಿ ನಾನು ಪೊಲೀಸ್ ಪೇದೆಗೆ ಎಫ್. ಐ. ಆರ್. ಮಾಡಲು ಕೇಳಿದ್ದೆನು. ಆತ ನಮಗೆ ಮೊದಲು ಆಸ್ಪತ್ರೆಗೆ ಹೋಗಲು ತಿಳಿಸಿದ್ದನು. ಕಾರಣ ನಾವೆಲ್ಲರೂ ಸಿಂಧನೂರಿನ ಸರಕಾರಿ ಆಸ್ಪತ್ರೆಗೆ ಹೋಗಿ

ಸಾಯಂಕಾಲದವರೆಗೆ ಉಪಚಾರ ಪಡೆದಿದ್ದೇವೆ.

15. ಅದೇ ದಿನ ಸಾಯಂಕಾಲ 09-00 ಗಂಟೆಗೆ ನಾನು ಪೊಲೀಸ್ ಠಾಣೆಗೆ ಹೋಗಿ ಕಂಪ್ಲೇಂಟ್ ಕೊಟ್ಟಿದ್ದೇನೆ. ಸಾಕ್ಷಿ ಗುರುತಿಸಿದ ಕಂಪ್ಲೇಂಟನ್ನು ನಿ.ಪಿ.1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

16. ಮರುದಿನ ಬೆಳಿಗ್ಗೆ 09-00 ರಿಂದ 10-00 ಗಂಟೆಗೆ ಪೊಲೀಸರು ಗಲಾಟೆ ಆದ ಸ್ಥಳಕ್ಕೆ ಬಂದಿದ್ದರು. ಅಲ್ಲಿ ಪೊಲೀಸರು ಪಂಚನಾಮೆ ಮಾಡಿದ್ದಾರೆ. ಆಗ ನನ್ನ ಸಹಿ ಪಡೆದಿದ್ದಾರೆ. ಅಲ್ಲಿದ್ದ ಎರಡು ಬಡಿಗೆ ಮತ್ತು ಎರಡು ಕಲ್ಲುಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆದಿದ್ದಾರೆ. ಸಾಕ್ಷಿ ಗುರುತಿಸಿದ ಬಡಿಗೆಗಳನ್ನು ಮುದ್ದೆಮಾಲು 1, 2 ಮತ್ತು ಕಲ್ಲುಗಳನ್ನು ಮುದ್ದೆಮಾಲು 3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಹಅಗೂ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಮೂರು ಛಾಯಾ ಚಿತ್ರಗಳಲ್ಲಿ ನನ್ನಭಾವ ಚಿತ್ರಗಳು ಇವೆ. ಸಾಕ್ಷಿ ಗುರುತಿಸಿದ ಛಾಯಾ ಚಿತ್ರಗಳನ್ನು ನಿ.ಪಿ.3 ಎಂದು ಗುರುತಿಸಲಾಯಿತು.

17. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

<u>ಪಾಟೀ ಸವಾಲು**: 1** ರಿಂದ **20** ನೇ ಆರೋಪಿ ಪರ ವಕೀಲರಿಂದ**:**</u>

ಆರೋಪಿತರ ಪರವಾಗಿ ಎಮ್. ಎಸ್. ಬಿ. ವಕೀಲರು ಸಮಯ ಕೋರಿದ್ದಾರೆ. ಯಾವುದೇ ಸಕಾರಣ ಇಲ್ಲದೆ ಇರುವುದರಿಂದ ಅವರ ವಿನಂತಿಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು